ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ (ದಂಡು).

ಆಹಾರ ಧಾನ್ಯಗಳ ಧಾರಣೆಗಳು :—

	ಇದೇ ವಾರಕ್ಕೆ	ಹಿಂದಿನ 5 ವರ್ಷಗಳ ಅಂದಾಜು.	ಚಾಲ್ತಿ.
ಅಕ್ಕಿ	ರೂಪಾಯಿ 1ಕ್ಕೆ	7	6 ರಿಂದ 6½ರ ವರಿಗೆ ಸೇರುಗಳು
ರಾಗಿ	"	18¾	14 ರಿಂದ 15ರ ವರಿಗೆ ಸೇರುಗಳು

ವ್ಯವಸಾಯ ಕೆಲಸ—ರಾಗಿ ಪೈರುಗಳ ಕಳೇಕೀಳುವದು.

ದನಗಳು ಒಳ್ಳೇ ಸ್ಥಿತಿಯಲ್ಲಿವೆ. ನೀರೂ, ಹುಲ್ಲೂ ಸಾಕು.

ಬೆಂಗಳೂರುಪಟ್ಟಣ ಮತ್ತು ತಾಲ್ಲೂಕುಗಳು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕಾರ್ಯದ ಅಭಿವೃದ್ಧಿ :—ಬಿತ್ತನೆಯು ಸ್ವಲ್ಪವಾಗಿದೆಯೆಂದು ರಿಪೋರ್ಟಾಗಿದೆ. ಸಾಲು ಹೊಡಿಯುವದು ಪೂರೈಸಿ ಬರುತ್ತಿದೆ. ಕಳೇಕೀಳುವದಕ್ಕೆ ಶುರು ಆಗಿದೆ.

ನಿಂತಿರುವ ಪೈರುಗಳು ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರು—ದೇವನಹಳ್ಳಿ ತಾಲ್ಲೂಕಿನಲ್ಲಿ ಅಲಸಿಗೆಡ್ಡೆಯನ್ನು ಹಾಕಿದಾರೆಂದು ರಿಪೋರ್ಟಾಗಿದೆ.

ಕುಯ್ಯಲಾದ ಪೈರು—ಹೊಸಕೋಟೆ ಕೆರೇಕೆಳಗೆ ಭತ್ತದ ಕುಯ್ಯಲು ಆಗಿದೆಯೆಂದು ರಿಪೋರ್ಟಾಗಿದೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಾಕಾದಷ್ಟು ಇವೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ಆದರೆ, ಆನೇಕಲ್ಲು ತಾಲ್ಲೂಕಿನಲ್ಲಿ ಇಂದ್ಲವಾಡಿ ಎಂಬ ಗ್ರಾಮದಲ್ಲಿ ದನಗಳಿಗೆ ಬೇಜವು ಊದೋಣಬೆರಿಂದಲೂ ಮತ್ತು ರಕ್ತ ಕಾರುವದರಿಂದಲೂ, ಅವುಗಳು ಸಾಯುತ್ತಿವೆಯೆಂದೂ, ಮತ್ತು ಕ್ಯಾಟಲ್ ಡಿಸೀಜ್ ಇನ್ಸ್ಪೆಕ್ಟರವರಿಗೆ ಇದನ್ನು ತಿಳಿಯಪಡಿಸಿ ಇವೆಯೆಂದೂ, ರಿಪೋರ್ಟಾಗಿದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕೋಲಾರ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸ—ಬಿತ್ತುವದು.

ನಿಂತಿರುವ ಪೈರುಗಳು—ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ. ರಾಗಿ ಪೈರುಗಳಿಗೆ ಕಂಬ್ಳೀ ಹುಳಗಳಿಂದ ನಷ್ಟವಾಗಿದೆ.

ಬಿತ್ತನೆಯಾದ ಪೈರುಗಳು—ಬೌರಿಂಗ್‌ಪೇಟೆ, ಮುಳಬಾಗಲು, ವಮಲೂರು, ಈ ತಾಲ್ಲೂಕುಗಳು ಹೊರ್ತು ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಕಾರ್ತೀಕ ಭತ್ತ ; ಮತ್ತು ಚಿಕ್ಕಬಳ್ಳಾಪುರದ ತಾಲ್ಲೂಕಿನಲ್ಲಿ ಹುರುಳಿ.

ಕುಯ್ಯಲಾದ ಪೈರು ಮತ್ತು ಉತ್ಪತ್ತಿಯ ಅಂದಾಜು—ಏನೂ ಇಲ್ಲ.

10. ಕಾಲದ ಆಯತಿಯು ಸುಮಾರಾಗಿದೆ. ಆಹಾರ ಜಿನಸು ಸಿಕ್ಕುತ್ತವೆ. ಬಿತ್ತಿ ಇರುವ ಕುಷ್ಕೀ ಪೈರುಗಳಿಗೆ ಮಳೆಯು ಅತ್ಯಾವಶ್ಯಕವಾಗಿ ಬೇಕಾಗಿದೆ.

11. ಬೌರಿಂಗ್‌ಪೇಟೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿಯೂ ಮತ್ತು ಕೋಲಾರದ ತಾಲ್ಲೂಕಿನ ಕೋಲಾರ ಮತ್ತು ಷಿಲ್ಲಿಂಗೇರಿಗಳಲ್ಲಿಯೂ ಅಲ್ಲಲ್ಲಿ ಆದ ಕೆಲವು ಪ್ಲೇಗ್ ಕೇಸುಗಳು, ಗೋರೀಬಿದನೂರು ತಾಲ್ಲೂಕಿನಲ್ಲಿ ಕಾಲರಾ, ಮತ್ತು ಶೀತಾಳಸಿಡುಬು ಮತ್ತು ಗುಡಿಬಂಡೆ ಸಬ್ ತಾಲ್ಲೂಕಿನಲ್ಲಿ ಸಿಡುಬು ಇವುಗಳು ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ತುಮಕೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಲ್ಲಿಯೂ ಉಳುವದು ಮತ್ತು ಬಿತ್ತುವದೂ ನಡಿಯುತ್ತಿವೆ.

ಬಿತ್ತನೆಯಾದ ಪೈರುಗಳು—ತುಮಕೂರು, ಮದ್ದಗಿರಿ, ಗುಬ್ಬಿ, ತಿಪಟೂರು, ಕುಣಿಗಲ್ಲು, ಕೊರಟಗೆರೆ, ತುರುವೇಕೆರೆ, ಇವುಗಳಲ್ಲಿ ಭತ್ತ. ತುಮಕೂರು, ಮದ್ದಗಿರಿ, ಚಿಕ್ಕನಾಯಕನಹಳ್ಳಿ, ಗುಬ್ಬಿ, ಕುಣಿಗಲ್ಲು, ಕೊರಟಗೆರೆ, ತುರುವೇಕೆರೆ, ಇವುಗಳಲ್ಲಿ ರಾಗಿ. ಮದ್ದಗಿರಿಯಲ್ಲಿ ನವಣೆ, ಸಾವೆ ಮತ್ತು ಹುರುಳಿ, ತೊಗರಿ ಮತ್ತು ಅವರೆ, ಇವುಗಳು ಗುಬ್ಬಿಯಲ್ಲೂ ಮತ್ತು ತಿಪಟೂರಿನಲ್ಲಿಯೂ.

ಕುಯ್ಯಲಾದ ಪೈರುಗಳು—ತುಮಕೂರು, ಗುಬ್ಬಿ, ತಿಪಟೂರು, ಕುಣಿಗಲ್ಲು, ತುರುವೇಕೆರೆ, ಇವುಗಳಲ್ಲಿ ಭತ್ತ. ಚಿಕ್ಕನಾಯಕನಹಳ್ಳಿಯಲ್ಲಿ ಉದ್ದೂ ಮತ್ತು ಹೆಸರೂ. ತಿಪಟೂರಿನಲ್ಲಿ ಎಳ್ಳು. ಗುಬ್ಬಿ ಮತ್ತು ಕುಣಿಗಲಿನಲ್ಲಿ ಕಬ್ಬು.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.

11. ಜನಾರೋಗ್ಯವು ಚೆನ್ನಾಗಿದೆ

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

747

190

ಮೈಸೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ನಂಜನಗೂಡು, ಗುಂಡ್ಲುಪೇಟೆ, ಮಳವಳ್ಳಿ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಭೂಮಿಯನ್ನು ಉತ್ತು, ಸಾಗುವಳಿಗೆ ತಯಾರ್ಮಾಡುತ್ತಿದ್ದಾರೆ. ಮೈಸೂರು, ನಂಜನಗೂಡು, ಚಾಮರಾಜನಗರ, ಹೆಗ್ಗಡದೇವನ ಕೋಟೆ, ಟಿ. ನರಸೀಪುರ, ಮಳವಳ್ಳಿ, ಕೃಷ್ಣರಾಜಪೇಟೆ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಭತ್ತದ ಸಸಿಯನ್ನು ಕಿತ್ತು ನಾಟುತ್ತಿದ್ದಾರೆ. ಮತ್ತು ಶ್ರೀರಂಗಪಟ್ಣ, ಎಡತೊರೆ ಈ ತಾಲ್ಲೂಕುಗಳಲ್ಲಿ ಭತ್ತದ ಸಸಿಯನ್ನು ಕಿತ್ತು ನಾಟಿದ್ದಾರೆ.

ನಿಂತಿರುವ ಪೈರುಗಳು—ಮೈಸೂರು ತಾಲ್ಲೂಕಿನಲ್ಲಿ ಕೆಲವು ಗ್ರಾಮಗಳಲ್ಲಿ ಬಾಡಿಹೋಗುತ್ತಿವೆಯೆಂದು ರಿಪೋರ್ಟು ಆಗಿರುವದು ಹೊರ್ತು, ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಚೆನ್ನಾಗಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಟಿ. ನರಸೀಪುರದ ತಾಲ್ಲೂಕಿನ ಕೆಲವು ಭಾಗಗಳಲ್ಲಿ ರಾಗಿ ಮತ್ತು ಅವರೆ; ನಂಜನಗೂಡು ತಾಲ್ಲೂಕಿನ ಕೆಲವು ಭಾಗಗಳಲ್ಲಿ ಹುರುಳಿ, ಹೆಸರು, ಹಲಸಂದಿ ಮತ್ತು ಹುಚ್ಚೆಳ್ಳು ಇವುಗಳು ಬಿತ್ತಲ್ಪಡುತ್ತಿವೆ.

ಕುಯ್ಯಲಾದ ಪೈರುಗಳು—ಹುಣಸೂರು, ಹೆಗ್ಗಡದೇವನಕೋಟೆ ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ರಾಗಿ; ಮೈಸೂರು, ನಂಜನಗೂಡು, ಗುಂಡ್ಲುಪೇಟೆ, ಟಿ. ನರಸೀಪುರ ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಜೋಳ; ಹುಣಸೂರು, ಎಡತೊರೆ, ಹೆಗ್ಗಡದೇವನಕೋಟೆ, ಗುಂಡ್ಲುಪೇಟೆ, ಕೃಷ್ಣರಾಜಪೇಟೆ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಎಳ್ಳು; ನಂಜನಗೂಡು, ಹುಣಸೂರು, ಎಡತೊರೆ ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಭತ್ತ; ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಕಬ್ಬು, ಉದ್ದು ಮತ್ತು ಹೆಸರು; ಇವುಗಳು ಕುಯ್ಯಲಾಗುತ್ತಿವೆ. ಮಳವಳ್ಳಿ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕಬ್ಬನ್ನು ಆಲೆ ಆಡಿಸುತ್ತಿದ್ದಾರೆ

10. ಕಾಲದ ಅಯತಿಯು ಚೆನ್ನಾಗಿದೆ. ಮೈಸೂರು, ಮಂಡ್ಯ, ನಂಜನಗೂಡು, ಚಾಮರಾಜನಗರ, ಮಳವಳ್ಳಿ, ನಾಗಮಂಗಲ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ನಿಂತಿರುವ ಪೈರುಗಳಿಗೆ ಮಳೆಯು ಬೇಕಾಗಿದೆಯೆಂದು ರಿಪೋರ್ಟಾಗಿದೆ.

11. ಜನಾರೋಗ್ಯವು ಚೆನ್ನಾಗಿದೆ; ಆದರೆ, ಮೈಸೂರು, ಹುಣಸೂರು, ನಂಜನಗೂಡು, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿಯೂ ಮತ್ತು ಮಂಡ್ಯ, ಹುಣಸೂರು, ನಂಜನಗೂಡು, ಈ ಕಸಬಾಗಳಲ್ಲಿಯೂ ಪ್ಲೇಗು ಇರುತ್ತಿದೆ.

12. ನಂಜನಗೂಡು ತಾಲ್ಲೂಕು ಆಲಗಂಚಿ ಗ್ರಾಮದಲ್ಲಿ ದನಗಳು ಕಾಲುಜ್ವರ, ಬಾಯಿಜ್ವರದಿಂದ ನರಳುತ್ತಿರುವದು ಹೊರ್ತು, ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಅವುಗಳು ಆರೋಗ್ಯವಾಗಿವೆ ಎಂದು ರಿಪೋರ್ಟಾಗಿದೆ. ನೀರೂ, ಹುಲ್ಲೂ ಎಲ್ಲಾ ಕಡೆಯಲ್ಲಿಯೂ ಸಿಕ್ಕುತ್ತವೆ.

ಹಾಸನ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಬೇಲೂರು ತಾಲ್ಲೂಕಿನಲ್ಲಿ ಭತ್ತದ ಮತ್ತು ಅರಕೀಕೆರೆ, ಹೊಳೇನರಸೀಪುರ ಈ ತಾಲ್ಲೂಕುಗಳಲ್ಲಿ ದೊಡ್ಡರಾಗಿಯ ಸಸಿಗಳನ್ನು ಕಿತ್ತು ನಾಟುತ್ತಿದ್ದಾರೆ.

ಬಿತ್ತನೆಯಾದ ಪೈರುಗಳು—ಚನ್ನರಾಯಪಟ್ಣದ ತಾಲ್ಲೂಕಿನಲ್ಲಿ ಹುರುಳಿ ಮತ್ತು ಅರಕೀಕೆರೆ ತಾಲ್ಲೂಕಿನಲ್ಲಿ ದೊಡ್ಡರಾಗಿ, ಇವುಗಳು ಬಿತ್ತಲ್ಪಡುತ್ತಿವೆ.

ನಿಂತಿರುವ ಪೈರುಗಳು—ರಾಗಿ, ಭತ್ತ, ಹರಳು, ತೊಗರಿ, ಕಬ್ಬು, ಮೆಣಸಿನಕಾಯಿ, ಇವುಗಳೆಲ್ಲಾ ಸಾಧಾರಣವಾಗಿ ಒಳ್ಳೇ ಸ್ಥಿತಿಯಲ್ಲಿವೆ. ಮಂಜರಾಬಾದ್ ತಾಲ್ಲೂಕಿನಲ್ಲಿ ಹೇಮಾವತಿ ನದಿಯ ದಡಗಳಲ್ಲಿರುವ ಕೆಲವು ಭತ್ತದ ಗದ್ದೆಗಳಲ್ಲಿ ಪ್ರವಾಹ ಬಂದು ನೀರು ಮುಚ್ಚಿಕೊಂಡದ್ದರಿಂದ, ಆ ಗದ್ದೆಗಳಲ್ಲಿ ಪೈರುಗಳಿಗೆ ಸ್ವಲ್ಪ ನಷ್ಟವು ಸಂಭವಿಸಿ ಇದೆಯೆಂದು ರಿಪೋರ್ಟಾಗಿದೆ.

ಕುಯ್ಯಲಾದ ಪೈರುಗಳು—ಚನ್ನರಾಯಪಟ್ಣದ ತಾಲ್ಲೂಕಿನಲ್ಲಿ ಭತ್ತ, ಕಬ್ಬು, ಜೋಳ ಮತ್ತು ಹುಚ್ಚೆಳ್ಳು.

10. ಕಾಲದ ಅಯತಿಯು ಚೆನ್ನಾಗಿದೆ ಆಹಾರ ಜೀನಸು ಸಿಕ್ಕುತ್ತವೆ..

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ, ಬೇಲೂರು, ಹಾಸನ ಈ ತಾಲ್ಲೂಕುಗಳಲ್ಲಿ ಪ್ಲೇಗು, ಮತ್ತು ಮಂಜರಾಬಾದ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಸಿಡುಬು ಮತ್ತು ಜ್ವರವು, ಇವುಗಳು ಇನ್ನೂ ಇದ್ದುಕೊಂಡಿವೆ.

12. ದನಗಳು ಒಳ್ಳೇ ಸ್ಥಿತಿಯಲ್ಲಿವೆ. ನೀರೂ, ಮೇವೂ, ಹುಲ್ಲೂ ಸಿಕ್ಕುತ್ತವೆ.

ಶಿವಮೊಗ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸ—ಶಿವಮೊಗ್ಗ, ತೀರ್ಥಹಳ್ಳಿ, ನಗರ ಈ ತಾಲ್ಲೂಕುಗಳಲ್ಲಿ ಕಳೆ ಕೀಳುವ ಕೆಲಸವು ನಡಿಯುತ್ತಿದೆ.

ನಿಂತಿರುವ ಪೈರುಗಳು—ಯಾವವಂದರೆ, ಭತ್ತ, ರಾಗಿ, ಕಬ್ಬು, ಜೋಳ, ಇವುಗಳು ಒಳ್ಳೇ ಸ್ಥಿತಿಯಲ್ಲಿವೆ. ಮಲ್ನಾಡು ತಾಲ್ಲೂಕುಗಳಲ್ಲಿ ಅಡಿಕೆ ಫಸಲಿಗೆ "ಕೊಳೇರೋಗವು" ಹಿಡಿದು ಇದೆ.

10. ಕಾಲದ ಅಯತಿಯು ಸಾಧಾರಣವಾಗಿ ಚೆನ್ನಾಗಿದೆ. ಸಾಕಾದಷ್ಟು ಆಹಾರ ಜೀನಸು ಸಿಕ್ಕುತ್ತವೆ.

11. ಜನಾರೋಗ್ಯವು ಸಾಧಾರಣವಾಗಿ ಸುಮಾರಾಗಿದೆ. ಆದರೆ, ಶಿವಮೊಗ್ಗ, ತೀರ್ಥಹಳ್ಳಿ, ಇವು ವಿನಹಾ ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಸಿಡುಬೂ ಮತ್ತು ಜ್ವರವೂ ಇವು ಇರುತ್ತಿವೆ. ಸೊರಬ, ಸಾಗರ ಇವುಗಳಲ್ಲಿ ಸಿಡುಬು ಕಮ್ಮಿಯಾಗಿ ಬರುತ್ತಿದೆ. ಹೊನ್ನಾಳಿ ತಾಲ್ಲೂಕಿನಲ್ಲಿಯೂ ಮತ್ತು ಕುಂಸಿ ಸಬ್ ತಾಲ್ಲೂಕಿನಲ್ಲಿಯೂ ಪ್ಲೇಗು ಇರುತ್ತಲಿದೆ.

12. ಹುಲ್ಲೂ, ಮೇವೂ ಬೇಕಾದಷ್ಟು ಸಿಕ್ಕುತ್ತವೆ. ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿ ಗೋಮಾರೀರೋಗವು ಇರುತ್ತಲಿದೆ.

ಕಡೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸ— ಚಿಕ್ಕ ಮಗಳೂರಿನ ಮಲನಾಡು ಪ್ರಾಂತ್ಯಗಳಲ್ಲಿಯೂ ಮತ್ತು ಕೊಪ್ಪ, ಎಡೇಹಳ್ಳಿ, ಶೃಂಗೇರಿ, ಇವುಗಳಲ್ಲಿಯೂ, ಭತ್ತದ ಸಸಿಯನ್ನು ಕಿತ್ತು ನಾಟುತ್ತಿದ್ದಾರೆ.

ನಿಂತಿರುವ ಪೈರುಗಳು—ಚಿಕ್ಕ ಮಗಳೂರಿನಲ್ಲಿ ಕಬ್ಬು, ಭತ್ತ ಮತ್ತು ತೊಗರಿ; ಕಡೂರಿನಲ್ಲಿ ಭತ್ತ, ಕಬ್ಬು, ಜೋಳ, ಉದ್ದು, ಹೆಸರು, ಹರಳು, ಹುಚ್ಚೆಳ್ಳು, ರಾಗಿ, ಹುರುಳಿ ಮತ್ತು ಮೆಣಸಿನಕಾಯಿ; ತರೀಕೆರೆಯಲ್ಲಿ ಭತ್ತ ಮತ್ತು ರಾಗಿ; ಕೊಪ್ಪದಲ್ಲಿ ಭತ್ತ, ಕಬ್ಬು, ಕಾಫಿ, ಯಾಲಕ್ಕಿ ಮತ್ತು ಅಡಿಕೆ; ಎಡೇಹಳ್ಳಿಯಲ್ಲಿ ಕಬ್ಬು, ಕಾಫಿ ಮತ್ತು ಭತ್ತ; ಮತ್ತು ಶೃಂಗೇರಿಯಲ್ಲಿ ಅಡಿಕೆ—ಇವುಗಳೆಲ್ಲಾ ಒಳ್ಳೇ ಸ್ಥಿತಿಯಲ್ಲಿವೆ. ಆದರೆ, ಕೊಪ್ಪದಲ್ಲಿಯೂ ಮತ್ತು ಶೃಂಗೇರಿಯಲ್ಲಿಯೂ ಅಡಿಕೆ ಫಸಲಿಗೆ ಕೊಳೇ ರೋಗವು ತಗಲಿದೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಕಡೂರಿನಲ್ಲಿ ಭತ್ತ, ರಾಗಿ, ಹುರುಳಿ, ಸಾವೆ, ಅವರೆ; ತರೀಕೆರೆಯಲ್ಲಿ ಭತ್ತ, ರಾಗಿ, ಜೋಳ, ಅವರೆ, ತೊಗರಿ ಮತ್ತು ಹುರುಳಿ ಇವುಗಳನ್ನು ಬಿತ್ತುತ್ತಿದ್ದಾರೆ.

ಕುಯ್ಯಲಾದ ಪೈರು—ಕಡೂರಿನಲ್ಲಿ ಕಬ್ಬು.

10. ಕಾಲದ ಆಯತಿಯು ಚೆನ್ನಾಗಿದೆ.

11. ಕನಬೂ ಚಿಕ್ಕ ಮಗಳೂರಿನಲ್ಲಿ ಪ್ಲೇಗ್ ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಸಾಧಾರಣವಾಗಿ ಆರೋಗ್ಯವಾಗಿವೆ. ತರೀಕೆರೆಯಲ್ಲಿ ಕೆಲವು ಗ್ರಾಮಗಳಲ್ಲಿ "ದೊಡ್ಡ ರೋಗವು" ಇದೆಯೆಂದೂ ಮತ್ತು ಚಿಕ್ಕ ಮಗಳೂರಿನಲ್ಲಿ ಅದು ಅಡಗಿಬರುತ್ತಿದೆಯೆಂದೂ ರಿಪೋರ್ಟಾಗಿದೆ. ಶೃಂಗೇರಿಯಲ್ಲಿ "ಲಾಲ್ ಸಂಕೋಲೆ" ರೋಗವು ಕವ್ವಿಯಾಗಿ ಬರುತ್ತಿದೆ. ನೀರೂ ಹುಲ್ಲೂ ಸಿಕ್ಕುತ್ತವೆ.

ಚಿತ್ರದುರ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಯಾವವೆಂದರೆ, ಜೋಳ, ರಾಗಿ, ಹುರುಳಿ, ಹೆಸರು, ಉದ್ದು, ಅರಳೆ, ಹರಳು, ತೊಗರಿ, ನವಣೆ, ಭತ್ತ, ಹೊಗೇಸೊಪ್ಪು, ಕಬ್ಬು, ಇವುಗಳು ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ. ಆದರೆ, ಹಿರಿಯೂರು ತಾಲ್ಲೂಕಿನಲ್ಲಿ ಮಳೆಯು ಅತ್ಯಾವಶ್ಯಕವಾಗಿ ಬೇಕಾಗಿದೆ. ಇಲ್ಲಿ ಮಳೆ ಇಲ್ಲದ ಕಾರಣ ಹತ್ತಿಯ ಪೈರನ್ನು ಬಿತ್ತಿಲ್ಲ. ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಮಳೆ ಹನಿಯುತ್ತಿದೆ.

ಬಿತ್ತನೆಯಾದ ಪೈರುಗಳು—ದೇವನಗೆರೆ, ಮೊಳಕಾಲ್ಮುರು, ಈ ತಾಲ್ಲೂಕುಗಳಲ್ಲಿಯೂ ಮತ್ತು ಹರಿಹರದ ಸಬ್ ತಾಲ್ಲೂಕಿನಲ್ಲಿಯೂ ಅರಳೆ; ಮತ್ತು ದೇವನಗೆರೆ ತಾಲ್ಲೂಕಿನಲ್ಲಿಯೂ ಮತ್ತು ಹರಿಹರದ ಸಬ್ ತಾಲ್ಲೂಕಿನಲ್ಲಿಯೂ ನವಣೆ.

ಕುಯ್ಯಲಾದ ಪೈರು—ಏನೂ ಇಲ್ಲ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜೀನಸು ಸಿಕ್ಕುತ್ತವೆ.

11. ಜನಾರೋಗ್ಯವು ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಬೆಂಗಳೂರು, } ಎ. ರಂಗಸ್ವಾಮಿ ಐಯ್ಯಂಗಾರ್,
1907ನೆಯ ಇಸವಿಯ ಆಗಸ್ಟ್ 27ನೆಯ ತಾರೀಖು. } ರವಿನೂ ಕಮಿಷನರ್.